**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

ಸಿಸಿ ಸಂಖ್ಯೆ 827/2018 **CW-1 PW-1**

**ಸಾಕ್ಷಿಯನ್ನು ದಿಃ 10.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ತೇಜಸ್ವಿನಿ |
| ಗಂಡನ ಹೆಸರುಃ | ರವಿಕುಮಾರ್ |
| ವಯಸ್ಸುಃ | 30 ವರ್ಷ |
| ವೃತ್ತಿಃ | ಖಾಸಗಿ ಕೆಲಸ |
| ವಾಸ ಸ್ಥಳಃ | ಬೆಂಗಳೂರು |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ತಾಯಿ. ಚಾ ಸಸಾ 3 ರಿಂದ 5 ರವರ ಪರಿಚಯವಿದೆ. ಆರೋಪಿ ನನ್ನ ಗಂಡ. ದಿನಾಂಕ 17.03.2018 ರಂದು ಬೆಳಿಗ್ಗ 10.30 ಗಂಟೆ ಸಮಯದಲ್ಲಿ ನಾನು, ಚಾ ಸಾ 2 ಮತ್ತು ನನ್ನ ಮಗ ಹಾಸನಕ್ಕೆ ಹೊರಡುವ ಸಲುವಾಗಿ ತಯಾರಾಗುತ್ತಿದ್ದಾಗ ಆರೋಪಿಯು ನಮ್ಮ ಮನೆ ಬಳಿ ಬಂದು ನಮ್ಮ ಮಗವನ್ನು ಕೊಡು ಎಂದು ಕೇಳಿದ್ದು, ಆಗ ನಾನು ನ್ಯಾಯಾಲಯದಲ್ಲಿ ತೀರ್ಮಾನವಾಗುವವರೆಗೂ ಕೊಡುವುದಿಲ್ಲ ಎಂದು ಹೇಳಿದ್ದು ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ಬೈದು ಕೈಯಲ್ಲಿ ನನ್ನ ಮೈಗೆ ಹೊಡೆದು ನನ್ನ ಕುತ್ತಿಗೆಯನ್ನು ಹಿಸುಕಿರುತ್ತಾರೆ. ನಂತರ ಕಲ್ಲಿನಿಂದ ಬೆನ್ನಿಗೆ ಹೊಡೆದಿರುತ್ತಾರೆ. ನಂತರ ಜಗಳ ಬಿಡಿಸಲು ಬಂದ ಚಾ ಸಾ 2 ರವರಿಗೂ ಚಪ್ಪಲಿಯಿಂದ ಮೈಗೆಲ್ಲಾ ಹೊಡೆದಿರುತ್ತಾರೆ. ನಂತರ ಚಾ ಸಾ 3 ಮತ್ತು 4 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಆರೋಪಿಯು ಕಾರಿನಲ್ಲಿ ಹೋಗಿರುತ್ತಾನೆ, ನಂತರ ನನ್ನನ್ನು ಮತ್ತು ಚಾಸಾ

ಸಿಸಿ ಸಂಖ್ಯೆ 827/2018

**CW-1 PW-1**

2 ರವರನ್ನು ಚಾ ಸಾ 3 ಮತ್ತು 4 ರವರು ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**ಸಹಿ/-**
**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**